175

## ಕರ್ನಾಟಕ ಸರ್ಕಾರ

ಸಂ: ಹಿವಅನಿ: ವಿವೇ-2: ಶುವಿ: ಸಿಆರ್-60: 88-89

ನಿರ್ದೇಶಕರವರ ಕಛೇರಿ
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ
ಇಲಾಖೆ, ಬೆಂಗಳೂರು, ದಿ: 31-12-1988.

### ಸುತ್ತೋಲೆ

ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ 229 ಬಿಸಿಎ :80, ದಿನಾಂಕ: 16-12-82ರ ನ್ವಯ ಕುಟುಂಬದ ವಾರ್ಷಿಕ ಆದಾಯ 3,600-00 ರೂಳಗಿನ ವಿದ್ಯಾರ್ಥಿಗಳಿಗೆ ಮಾತ್ರ ಶುಲ್ಕ ವಿನಾಯಿತಿ ಮಂಜೂರು ಮಾಡಬೇಕಾಗಿರುತ್ತದೆ. 3,600-00 ರೂ.ಗಳಿಗಿಂತ ಹೆಚ್ಚಿನ ಆದಾಯ ಉಳ್ಳ ವಿದ್ಯಾರ್ಥಿಗಳೂ ಸಹ ಕಡಿಮೆ ಆದಾಯ ತೋರಿಸಿ, ಸುಳ್ಳು ಆದಾಯ ಪ್ರಮಾಣ ಪತ್ರಗಳನ್ನು ಪಡೆದು ಶುಲ್ಕ ವಿನಾಯತಿ ಸೌಲಭ್ಯ ಪಡೆಯುತ್ತಿರುವುದು ತಿಳಿದು ಬಂದಿರುತ್ತದೆ. 3,600-00 ರೂ.ಗಳೊಳಗಿನ ಕುಟುಂಬಗಳನ್ನು ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸೊಸೈಟಿಗಳ ಯೋಜನೆಯಡಿ ಯವರಿಂ ಈಗಾಗಲೇ ಗುರ್ತಿಸಿ ಅಂತಹ ಕುಟುಂಬಗಳವರಿಗೆ ಗುರ್ತಿಸಿ ಚೀಟಿ ಮತ್ತು ಹಸಿರು ಕಾರ್ಡುಗಳನ್ನು ನೀಡಿರುವುದರಿಂದ, ಯಾರು ಈ ಹಸಿರು ಕಾರ್ಡುಗಳನ್ನು ಪಡೆದಿರುತ್ತಾರೋ ಅಂತಹವರ ಮಕ್ಕಳಿಗೆ ಮಾತ್ರ ಶುಲ್ಕ ವಿನಾಯಿತಿ ಪಡೆಯಲು ಅರ್ಹರಾಗಿರುತ್ತಾರೆ. ಆದ್ದರಿಂದ ಶುಲ್ಕ ರಿಯಾಯಿತಿಯ ಮರುಪಾವತಿ ಬಿಲ್ಲುಗಳಿಗೆ ಮೇಲು ರುಜು ಮಾಡುವ ಸಮಯದಲ್ಲಿ ಕೂಲಂಕುಶವಾಗಿ ಪರಿಶೀಲಿಸಿದ ನಂತರ ಮೇಲು ಸಹಿ ಮಾಡಬೇಕು, ಈ ವಿಷಯವನ್ನು ಶುಲ್ಕ ವಿನಾಯಿತಿ ಮಂಜೂರು ಮಾಡುವ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಗಮನಕ್ಕೆ ತಂದು ಶುಲ್ಕ ವಿನಾಯಿತಿಯಲ್ಲಾಗುವ ದುರುಪಯೋಗ ತಡೆಗಟ್ಟಬೇಕು. ಆದ್ದರಿಂದ ನಿಮ್ಮ ಜಿಲ್ಲೆಯ ಎಲ್ಲಾ ಶುಲ್ಕ ವಿನಾಯಿತಿ ಮಂಜೂರು ಮಾಡುವ ಅಧಿಕಾರಿಗಳಿಗೆ ಸುತ್ತೋಲೆ ಮೂಲಕ ತಿಳಿಸಬೇಕೆಂದು ಸೂಚಿಸಲಾಗಿದೆ. ಜನವರಿ 31ನೇ ತಾರೀಖಿನೊಳಗೆ ಎಲ್ಲಾ ಶುಲ್ಕ ವಿನಾಯಿತಿ ಮಂಜೂರಾಗಬೇಕು. ಈ ಬಗ್ಗೆ ನಿಮ್ಮ ಜಿಲ್ಲೆಯ ಸಂಬಂಧಪಟ್ಟ ಶುಲ್ಕ ವಿನಾಯಿತಿ ಪ್ರಾಧಿಕಾರಿಗಳಿಗೆ ತಿಳಿಸಬೇಕು.

ಸಹಿ:-
(ಕೆ. ಕೇಶವರಾಜು) ನಿರ್ದೇಶಕರು
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ
ಬೆಂಗಳೂರು.

1) ರಾಜ್ಯದ ಎಲ್ಲಾ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲು ಕಳುಹಿಸಲಾಗಿದೆ.
2) ರಾಜ್ಯದ ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಛೇರಿ ಇವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಕಳುಹಿಸಲಾಗಿದೆ.

ಸಹಿ:-
ನಿರ್ದೇಶಕರ ಪರವಾಗಿ
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ
ಇಲಾಖೆ, ಬೆಂಗಳೂರು.
ಹಾಸನ

ಸಂ: ಬಿಸಿಎಂ: ಶುವಿ: ಸಿಆರ್-20:88-89

ದಿನಾಂಕ: 18-1-1989

ಪ್ರತಿ:-

1) ಹಾಸನ ಜಿಲ್ಲೆಯ ಎಲ್ಲಾ ಕಾಲೇಜುಗಳ ಪ್ರಾಚಾರ್ಯರುಗಳಿಗೆ, ಮತ್ತು ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2) ಎಲ್ಲಾ ತಹಶೀಲ್ದಾರರು ಹಾಸನ ಜಿಲ್ಲೆ, ಮತ್ತು ಎಲ್ಲಾ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಹಸಿರು ಕಾರ್ಡುಗಳ ಮಾಹಿತಿ ಒದಗಿಸಲು ಕೋರಿ ರವಾನಿಸಿದೆ.
3) ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಸನ ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ .
4) ಕಛೇರಿ ಪ್ರತಿ.